ಪ್ರಾರಂಭ ಮಾಡಲಿಕ್ಕೆ ತಡೆಯಾಗಿರುವುದು ನಿಜ. ಮಾನ್ಯ ಹಿಂದಿನ ಮುಖ್ಯ ಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಎರಡು ನೂರು ಹೊಸದಾಗಿರತಕ್ಕಂಥ ವಿದ್ಯಾರ್ಥಿನಿಲಯಗಳನ್ನು ರಾಜ್ಯದಲ್ಲಿ ಪ್ರಾರಂಭ ಮಾಡತಕ್ಕಂಥ ಆಶ್ವಾಸನೆಯಂನ್ನು ಕೊಟ್ಟಿದ್ದಾರೆ. ಅದನ್ನು ಈ ವರ್ಷ ಕಾರ್ಯಗತ ಮಾಡಲಿಕ್ಕೆ ಪ್ರಯತ್ನವನ್ನು ಮಾಡುತ್ತೇನೆ. ಜೊತೆಗೆ ನೂರು ರೂಪಾಯಿ ಮತ್ತು ೧೫೦ ರೂಪಾಯಿಗಳನ್ನು ನಾವು ವಿದ್ಯಾರ್ಥಿಗಳಿಗೆ ಪೂರ್ವ ಮೆಟ್ರಿಕ್ ಮತ್ತೆ ಮೆಟ್ರಿಕ್ ನಂತರದ ಒಂದು ವಿದ್ಯಾರ್ಥಿಗಳಿಗೆ ಕೊಡುತ್ತಿರತಕ್ಕಂಥ ಹಣವನ್ನು ಹೆಚ್ಚು ಮಾಡಬೇಕು ಎನ್ನುವ ಸಲಹೆ ಈಗಾಗಲೇ ಸರ್ಕಾರದ ಪರಿಶೀಲನೆಯಲ್ಲಿದೆ, ಅದನ್ನು ಹೆಚ್ಚು ಮಾಡಲಿಕ್ಕೆ ಆದಷ್ಟು ಬೇಗ ಪ್ರಯತ್ನವನ್ನು ಮಾಡುತ್ತೇವೆ.

ಬುಡಂಬುಡುಕೆ ಮಂತ್ರ ಸಿಳ್ಳೇಕ್ಯಾತ ಜಾತಿಗಳನ್ನು ''ಎ'' ಗ್ರೂಪ್‌ಗೆ ಸೇರಿಸುವುದು

೨೯೭೫. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ) ಮಾನ್ಯ ಸಮಾಜ ಕಲ್ಯಾಣ, ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ರಾಜ್ಯದಲ್ಲಿ ಅತಿ ಅಲ್ಪಸಂಖ್ಯೆಯಲ್ಲಿರುವ ಅಲೆಮಾರಿ ಜನಾಂಗವಾದ ಬುಡುಬುಡಿಕೆ ಸಿಳ್ಳೇಕ್ಯಾತ ಜಾತಿಗಳನ್ನು 'ಎ' ಗ್ರೂಪಿಗೆ ಸೇರಿಸುವ ಬದಲು 'ಬಿ' ಗ್ರೂಪ್‌ಗೆ ಸೇರಿಸಿರುವುದು ಸರ್ಕಾರ ದಮರ ಗಮನಕ್ಕೆ ಬಂದಿದೆಯೇ ?

(ಆ) ಹಾಗಿದ್ದಲ್ಲಿ ಈ ಅಲೆಮಾರಿ ಜನಾಂಗಕ್ಕೆ ಅನ್ಯಾಯ ಮಾಡಿದಂತಾಗಿಲ್ಲವೆ, ಹಾಗೂ ಈ ಬಗ್ಗೆ ಕ್ರಮ ಕೈಗೊಳ್ಳುವರೆ ?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಸಮಾಜ ಕಲ್ಯಾಣ ಸಚಿವರು).—

(ಅ) ಬುಡುಬುಡುಕೆ ಜಾತಿಯನ್ನು ದಿನಾಂಕ ೧೫-೧೦-೧೯೮೬ ಸರ್ಕಾರಿ ಆದೇಶ ಸಂಖ್ಯೆ/ ಎಸ್‌ಡಬ್ಲ್ಯೂಎಲ್ ೬೬ ಬಿಸಿವಿ ೮೬ ಅನ್ವಯ 'ಎ' ಗುಂಪಿಗೆ ಸೇರಿಸಲಾಗಿದೆ. ಸಿಳ್ಳೇಕ್ಯಾತ ಜಾತಿಯನ್ನು ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರಿಸಲಾಗಿದೆ.

(ಆ) ಉದ್ಭವಿಸಿಲ್ಲ.

ಅಧ್ಯಕ್ಷರು.—ಮಾನ್ಯ ಲಕ್ಕಪ್ಪನವರೇ, ನಿಮ್ಮ ಬಡಂಬಡುಕೆ ಪ್ರಶ್ನೆಗೆ ಸಪ್ಲಿಮೆಂಟರಿ ಕೇಳಿ.

ಶ್ರೀ ಕೆ. ಲಕ್ಕಪ್ಪ.—ನನ್ನದು ಬಡಂಬಡುಕೆ ಪ್ರಶ್ನೆ ಅಲ್ಲ. ಬಡುಬಡುಕೆ ಜನಾಂಗಕ್ಕೆ ಸೇರಿದ ಪ್ರಶ್ನೆ.

ಅಧ್ಯಕ್ಷರು.—ನೀವು ಬುಡುಬುಡಿಕೆ ಎಂದು ಹೇಳಲಿಲ್ಲ. ಬುಡುಬುಡಿಕೆಯ ಪ್ರಶ್ನೆ ಕೇಳಿ ಎಂದು ಹೇಳಿದೆ.

ಶ್ರೀ ಕೆ. ಲಕ್ಕಪ್ಪ.—ನಾನೂ ಬುಡಂಬುಡಿಕೆ ಅಲ್ಲ, ಪ್ರಶ್ನೆಯೂ ಬುಡಂಬುಡಿಕೆ ಅಲ್ಲ.

ಶ್ರೀ ಪುಲ್ಲಾರಿ ಗೌಡ ಎಸ್. ಪಾಟೀಲ್.—ನಾವು ಬುಡುಬುಡಿಕೆ ಆದರೆ ನೀವು ಬುಡುಬುಡಿಕೆಯ ಅಧ್ಯಕ್ಷರು ಆಗುತ್ತೀರಿ...

ಅಧ್ಯಕ್ಷರು.—ನಾನು ಹೇಳಿದೆನಲ್ಲಾ. ನೀವು ಬುಡುಬುಡಿಕೆ ಅಲ್ಲ, ನಾನೂ ಅಲ್ಲ.

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ, ಈ ಸಿಳ್ಳೇಕ್ಯಾತ, ಕಿಳ್ಳೇಕ್ಯಾತ ಎಲ್ಲಾ ಒಂದೇ ಜಾತಿ ಅಲ್ಲ. ಇಲ್ಲಿ ಏನು ಆಗಿದೆ ಅಂದರೆ ಗ್ರೂಪ್ ವೈಸ್ ವಿಂಗಡಣೆ ಮಾಡುವಾಗ ಈ ಜನಾಂಗವನ್ನು ಸಿಳ್ಳೇಕ್ಯಾತ ಕಿಳ್ಳೇಕ್ಯಾತ ಎಂದು ತೋರಿಸಿದ್ದಾರೆ ಆದರೆ ಬುಡುಬುಡಿಕೆ ಸೇರಿಸಿಲ್ಲ. ಇವರು ಇದರ ಬಗ್ಗೆ ಒಂದು ಮನವಿಯನ್ನು ಕೊಟ್ಟಿದ್ದಾರೆ. ಹಿಂದೆ ನಾನು ಹಿರಿಯರ ಕೆಳಗಡೆ ಪ್ರಶ್ನೆ ಕೇಳಿದಾಗ ಈ ಜನಾಂಗವನ್ನು ಹಿಂದುಳಿದ ವರ್ಗಗಳ ಆಯೋಗಕ್ಕೆ ಶಿಫಾರಸ್ಸು ಮಾಡಿ ಸೇರಿಸುತ್ತೇವೆಂದು ಹೇಳಿದ್ದರು. ಈಗ ಹಿಂದುಳಿದ ವರ್ಗಕ್ಕೆ ಈ ಜನಾಂಗವನ್ನು ಸೇರಿಸಿರುವುದಾಗಿ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಯಾವಾಗ ಸೇರಿಸಿದ್ದೀರಂದು ಕೇಳಲಾಗಿ ೧೫-೧೦-೧೯೮೬ರಲ್ಲಿ ಸೇರಿಸಲಾಗಿದೆ ಎಂದು ಹೇಳಿದ್ದಾರೆ, ಅದಕ್ಕಾಗಿ ಮಾನ್ಯ ಸಚಿವರಿಗೆ ನನ್ನ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಆದರೆ ಹಾಸ್ಟೆಲ್‌ಗಳಿಗೆ ಸೀಟು

ಕೊಡುವಾಗ, ನೌಕರಿ ಕೊಡುವಾಗ ಜಾತಿಯ ಸರ್ಟಿಫಿಕೇಟ್ ಅನ್ನು ಕೇಳುವಾಗ ಅಧಿಕಾರಿಗಳು ಇಷ್ಟೂ ಮಾಡುತ್ತಿಲ್ಲ. ಆದಕ್ಕೋಸ್ಕರವಾಗಿ ಈ ಜನಾಂಗದವರಿಗೆ ಸರ್ಟಿಫಿಕೇಟ್ ಕೊಡುವಂತೆ ತಾವು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡಬೇಕು. ಅಧಿಕಾರಿಗಳು ಸರ್ಟಿಫಿಕೇಟ್ ಕೊಟ್ಟರೆ 'ಎ' ಗ್ರೂಪ್ ಜನರಿಗೆ ಸಿಗುತ್ತಿರುವ ಸೌಲಭ್ಯಗಳಿಲ್ಲಾ ಇವರಿಗೂ ಸಹ ಸಿಗುತ್ತವೆ. ಇಲ್ಲದಿದ್ದರೆ ಈ ಸೌಲಭ್ಯಗಳಿಂದ ಅವರು ವಂಚಿತರಾಗಬೇಕಾಗುತ್ತದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ತಾವು ಆದೇಶ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ದಿನಾಂಕ ೧೩-೧೦-೮೬ರಲ್ಲೇ ಸರ್ಕಾರಿ ಆದೇಶದ ಪ್ರಕಾರ ಈ ಬುಡಬುಡಿಕೆ ಜಾತಿಯನ್ನು 'ಎ' ಗುಂಪಿಗೆ ಸೇರಿಸಲಾಗಿದೆ. ಈ ಸಿಳ್ಳೈಕ್ಯಾತ ಜಾತಿಯನ್ನು ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರಿಸಲಾಗಿರುವುದರಿಂದ ಈ ಜಾತಿಯ ಜನರನ್ನು 'ಎ' ಗುಂಪಿಗೆ ಸೇರಿಸುವ ಅಗತ್ಯ ಇಲ್ಲ. ಈ ಒಂದು ಆದೇಶದ ಪ್ರಕಾರ ರಾಜ್ಯದ ಯಾವ ಭಾಗದಲ್ಲಿ ಯಾವ ತಾಲ್ಲೂಕ್‌ನಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಸರ್ಟಿಫಿಕೇಟ್ ಕೊಟ್ಟಿಲ್ಲ, ಕೊಡುವುದಕ್ಕೆ ಒಪ್ಪಿಲ್ಲ ಎಂದು ತಾವು ತಿಳಿಸಿದರೆ ನಾನು ಅವರ ಮೇಲೆ ಕ್ರಮ ಕೈಕೊಳ್ಳುತ್ತೇನೆ. ತಾವು ದಯವಿಟ್ಟು ವಿವರಗಳನ್ನು ಕಳುಹಿಸಿಕೊಡಿ.

ಶ್ರೀ ಬಿ. ಲಕ್ಕಪ್ಪ.—ನಾನು ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರೇ.....

ಅಧ್ಯಕ್ಷರು.—ನಾನು ಮಾನ್ಯ ಕಾನಡೆಯವರಿಗೂ ಅವಕಾಶ ಕೊಟ್ಟಿಲ್ಲ, ಮಾನ್ಯ ಯಡಿಯೂರಪ್ಪನವರಿಗೂ ಅವಕಾಶವನ್ನು ಕೊಟ್ಟಿಲ್ಲ, ಡಾ॥ ಶಿವಮೂರ್ತಿಗೌಡರಿಗೂ ಕೊಟ್ಟಿಲ್ಲ ಮತ್ತು ನಿಮಗೂ ಕೊಡುವುದಿಲ್ಲ. ದಯವಿಟ್ಟು ತಾವು ಕೂಡ್ರಿ. ಮಿನಿಸ್ಟ್ರು ಹೇಳಿದರೂ ನಾನು ಹೇಳಬೇಡ ಎಂದು ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು.—ಸಾಧ್ಯ ಇಲ್ಲ, ನೋ, ನೋ.

ಶ್ರೀ ಬಿ. ಲಕ್ಕಪ್ಪ.—ಒಂದೇ ಒಂದು ಸಪ್ಲಿಮೆಂಟರಿ.....

ಅಧ್ಯಕ್ಷರು.—ಆಗುವುದಿಲ್ಲ, ಮಾನ್ಯ ವೆಂಕಟರಾಮಯ್ಯನವರೇ ಒಂದು ಸಾರಿ ಕೇಳ್ರಿ.

ಶ್ರೀ ಆರ್. ವೆಂಕಟರಾಮಯ್ಯ.—ಒಂದೇ ಪ್ರಶ್ನೆ ಈ ಗ್ಯಾರಂಟ್ ಇನ್ ಏಡ್.....

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರಿಗೆ ಒಂದು ಚಾನ್ಸ್‌ನ್ನು ಕೊಟ್ಟಿದ್ದೀರಿ. ಅದರಂತೆ ಇವರಿಗೆ ಏತಕ್ಕೆ ಕೊಟ್ಟಿಲ್ಲ ?

ಅಧ್ಯಕ್ಷರು.—ಶ್ರೀಮತಿ ನಾಗರತ್ನಮ್ಮನವರೇ, ತಾವು ಈಗ ಬಂದಿದ್ದೀರಿ. ಇನ್ನು ಪ್ರಶ್ನೆಗಳಿಗೆ ಇದ್ದವು. ವೇಳೆ ಮುಗಿದಿದ್ದುದರಿಂದ ಅಷ್ಟನ್ನು ಲ್ಯಾಪ್ಸ್ ಎಂದು ಹೇಳಿಬಿಟ್ಟಿದೆ. ವಿರೋಧಿ ಪಕ್ಷದ ಉಪನಾಯಕರು ಮತ್ತು ಲಾ ಮಿನಿಸ್ಟರ್ ಈ ಎರಡು ಪ್ರಶ್ನೆಗಳನ್ನು ಲ್ಯಾಪ್ಸ್ ಮಾಡಬಾರದು ಬೇಡ, ಎಲ್ಲರಿಗೂ ಅವಕಾಶವನ್ನು ಕೊಡಿ, ಒಂದೇ ಸಾರಿ ಪ್ರಶ್ನೆಯನ್ನು ಕೇಳಲಿ. ಯಾರಿಗೂ ಸಪ್ಲಿಮೆಂಟರಿ ಹೇಳುವುದು ಬೇಡ ಎಂದು ಹೇಳಿದರು. ಅದರಂತೆ ನಾನು ಮಾನ್ಯ ಕಾನಡೆಯವರಿಗೂ ಅವರಿಗೂ ಅವಕಾಶ ಕೊಟ್ಟಿಲ್ಲ. ಮಾನ್ಯ ಯಡಿಯೂರಪ್ಪನವರಿಗೂ ಕೊಟ್ಟಿಲ್ಲ, ಆದ್ದರಿಂದ ಇವರಿಗೂ ಕೊಡುವುದಿಲ್ಲ. ಕೊಡುವುದಕ್ಕೆ ಆಗುವುದಿಲ್ಲ, ಸಾಧ್ಯ ಇಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಪ್ರಶ್ನೆ ಕೇಳಲಿಲ್ಲ...

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ಶ್ರೀಮತಿ ನಾಗರತ್ನಮ್ಮನವರೇ ತಾವು ಈಗ ಬಂದಿದ್ದೀರಿ, ನಾವು ಅವರಿಗೆ ಪ್ರಶ್ನೆ ಕೇಳಲು ಅವಕಾಶ ಕೊಡುವುದಿಲ್ಲ...

ಶ್ರೀ ಎಂ. ಎಸ್. ಕೃಷ್ಣನ್.—ಅವರು ಪ್ರಶ್ನೆಯನ್ನು ಇನ್ನೂ ಕೇಳಿಲ್ಲ...

ಅಧ್ಯಕ್ಷರು.—ಆಗುವುದಿಲ್ಲ ಶ್ರೀಮತಿ ನಾಗರತ್ನಮ್ಮನವರೇ, ಕೂಡಿ...

ಶ್ರೀ ಎಂ. ಎಸ್. ಕೃಷ್ಣನ್,—ಮಾನ್ಯ ವೆಂಕಟರಾಮಯ್ಯನವರು ಒಂದೇ ಒಂದು ಪ್ರಶ್ನೆ ಕೇಳಿ ವುದಕ್ಕೂ ಬಿಟ್ಟಿಲ್ಲ.

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ, ಒಂದೇ ಒಂದು ಪ್ರಶ್ನೆ ಕೇಳುವುದಕ್ಕೂ ನನಗೆ ಬಿಟ್ಟಿಲ್ಲ ನಾನು ಒಂದೇ ಒಂದು ಪ್ರಶ್ನೆ ಕೇಳಿಲ್ಲ...

ಅಧ್ಯಕ್ಷರು.—ಒಂದೇ ಒಂದು ಪ್ರಶ್ನೆ ಕೇಳಲಿಲ್ಲ ಅಂದರೆ ಪ್ರಶ್ನೆ ಕೇಳುವುದಕ್ಕೆ ನಿಮಗೆ ಅವಕಾಶ ಕೊಡಿತ್ತೇನೆ. ಅವರು ಉತ್ತರ ಹೇಳಿದ್ದಾರೆ, ಮೊದಲು ಮಾನ್ಯ ವೆಂಕಟರಾಮಯ್ಯನವರದ್ದು ಮುಗಿಯಲಿ ನಿಮಗೂ ಅವಕಾಶ ಕೊಡುತ್ತೇನೆ. ಮಾನ್ಯ ವೆಂಕಟರಾಮಯ್ಯನವರೇ ಕೇಳಿ.

ರಾಜ್ಯದಲ್ಲಿ ಹೈಸ್ಕೂಲ್ ಇರುವ ಸ್ಥಳಗಳಲ್ಲಿ ಹಾಸ್ಟೆಲ್ ವ್ಯವಸ್ಥೆ ಮಾಡಲಾಗುವುದು.

೨೯೫೬. ಶ್ರೀ ಆರ್. ವೆಂಕಟರಾಮಯ್ಯ(ಮುಳಬಾಗಿಲು) —ಮಾನ್ಯ ಸಮಾಜ ಕಲ್ಯಾಣ,ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೬೫–೬೬ನೇ ಸಾಲಿನಲ್ಲಿ ಕರ್ನಾಟಕದಲ್ಲಿರುವ ಒಟ್ಟು ಪ್ರೌಢ ಪ್ರಾಥಮಿಕ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಆ) ಕರ್ನಾಟಕದಲ್ಲಿ ಎಷ್ಟು ಹೈಸ್ಕೂಲ್‌ಗಳಿವೆ? ಹಾಗೂ ಎಷ್ಟು ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವ್ಯವಸ್ಥೆ ಕೊಡಲಾಗಿದೆ.

ಇ) ಹೈಸ್ಕೂಲ್ ಇರುವ ಸ್ಥಳಗಳಲ್ಲಿ ಹಾಸ್ಟೆಲ್‌ಗಳ ಅವಶ್ಯಕತೆ ಇದೆಯಲ್ಲವೇ?

ಈ) ಕೋಲಾರ ಜಿಲ್ಲೆಯಲ್ಲಿ ಎಷ್ಟು ಹೈಸ್ಕೂಲ್‌ಗಳಿವೆ ಹಾಗೂ ಕೊಟ್ಟಿರುವ ಹಾಸ್ಟೆಲ್‌ಗಳೆಷ್ಟು

ಉ) ಅಲ್ಲಿ ಹೆಚ್ಚಿಗೆ ಹಾಸ್ಟೆಲ್ ಕೊಡುವ ಬಗ್ಗೆ ಬೇಡಿಕೆಗಳೇನಾದರೂ ಬಂದಿದೆಯೇ?

ಊ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಸಮಾಜ ಕಲ್ಯಾಣ ಸಚಿವರು.)

ಅ) ಶಿಕ್ಷಣ ಇಲಾಖೆಯಿಂದ ಪಡೆದಿರುವ ಮಾಹಿತಿಯನ್ವಯ ೧೯೬೫–೬೬ನೇ ಸಾಲಿನಲ್ಲಿ ಕರ್ನಾಟಕದಲ್ಲಿ ಒಟ್ಟು ೯,೨೨,೫೭೭ ಪ್ರೌಢ ಪ್ರಾಥಮಿಕ ವಿದ್ಯಾರ್ಥಿಗಳಿದ್ದಾರೆ.

ಆ) ಕರ್ನಾಟಕದಲ್ಲಿ ಒಟ್ಟು ೩೭೯ ಹೈಸ್ಕೂಲ್‌ಗಳಿವೆ. ವೆಂಟ್ರಿಕ್‌ಪೂರ್ವ ತರಗತಿಯಲ್ಲಿ ಓದುತ್ತಿರುವ ಒಟ್ಟು ೨೯,೮೨೯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವ್ಯವಸ್ಥೆ ಮಾಡಲಾಗಿದೆ.

ಇ) ಹೌದು.

ಈ) ಶಿಕ್ಷಣ ಇಲಾಖೆಯಿಂದ ಸಂಗ್ರಹಿಸಿರುವ ಮಾಹಿತಿ ಪ್ರಕಾರ ಕೋಲಾರ ಜಿಲ್ಲೆಯಲ್ಲಿ ಒಟ್ಟು ೧೭೧ ಪ್ರೌಢ ಶಾಲೆಗಳಿವೆ ಮತ್ತು ಈ ಇಲಾಖೆಯ ಒಟ್ಟು ೩೮ ವೆಂಟ್ರಿಕ್‌ಪೂರ್ವ ವಸತಿನಿಲಯಗಳು ೫ ವೆಂಟ್ರಿಕ್‌ನಂತರದ ವಸತಿನಿಲಯಗಳೂ ಇವೆ.

ಉ) ಈ ವರ್ಷ ೧೦ ಹೊಸವ ಸತಿನಿಲಯಗಳನ್ನು ಆರಂಭಿಸುವ ಬಗ್ಗೆ ಬೇಡಿಕೆ ಬಂದಿದೆ.

ಊ) ರಾಜ್ಯದಲ್ಲಿ ಪ್ರಸಕ್ತ ವರ್ಷದಲ್ಲಿ ಒಟ್ಟು ೫೦ ಹೊಸ ವೆಂಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳನ್ನು ಆರಂಭಿಸುವ ಯೋಜನೆ ಇದೆ ಎಂದೂ, ಅದಕ್ಕೆ ಮುನ್ನ ಪ್ರತಿ ಜಿಲ್ಲೆಯಲ್ಲಿ ಎಷ್ಟು ಹಿಂದುಳಿದ ವರ್ಗದವರಿದ್ದಾರೆ ಎಷ್ಟು ಪ್ರೌಢಶಾಲೆ ವಿದ್ಯಾರ್ಥಿಗಳಿದ್ದಾರೆ, ಎಷ್ಟು ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಕರ್ಯ ಬೇಕಾಗಿದೆ ಇತ್ಯಾದಿ ಅಂಶಗಳ ಸಮೀಕ್ಷೆ ಮಾಡಿದ ನಂತರ, ಈ ಜಿಲ್ಲೆಯಲ್ಲಿ ಕೆಲವು ಹೊಸ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳುವುದೂ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಒಂದೇ ವಿಚಾರವನ್ನು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ, ಗ್ರಾಂಟ್ ಇನ್ ಏಡ್ ಹಾಸ್ಟೆಲ್‌ಗಳಲ್ಲಿ ಏನು ಅಕ್ರಮಗಳು ನಡೆಯುತ್ತಿವೆ. ಅದು